ಅರಣ್ಯ ಇಲಾಖೆಯ ಭೂ ಒತ್ತುವರಿ

156 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ತಾಲ್ಲೂಕು ರಂಗಸ್ವಾಮಿ ಗುಡ್ಡದಲ್ಲಿ ಅರಣ್ಯ ಇಲಾಖೆಗೆ ಸೇರಿರುವ ಒಟ್ಟು ಪ್ರದೇಶ ಎಷ್ಟು?

ಆ) ಈ ಪ್ರದೇಶದಲ್ಲಿ ಯಾರಾದರೂ ಅಕ್ರಮವಾಗಿ ಒತ್ತುವರಿ ಮಾಡಿರುವರೆ, ಹಾಗಿದ್ದಲ್ಲಿ ಅಂತಹವರ ಮೇಲೆ ಜರುಗಿಸಲಾದ ಕ್ರಮವೇನು;

ಇ) ಈ ಒಂದು ಪ್ರದೇಶದಲ್ಲಿ ಅರಣ್ಯ ಸಮೃದ್ಧಿಗೆ ಇಲಾಖೆಯ ಕಾರ್ಯಕ್ರಮಗಳೇನು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) 890 ಹೆಕ್ಟೇರ್.

ಆ) 1978ಕ್ಕೂ ಮುಂಚಿನಿಂದ ಸುಮಾರು 40 ಮಂದಿ 26.040 ಏಕರೆ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಈ 40 ಜನರನ್ನು ಅರಣ್ಯ ಪ್ರದೇಶದಿಂದ ಉಚ್ಚಾಟನೆ ಮಾಡಲು ಪ್ರಥುತ್ನಗಳು ವಿಫಲವಾಗಿ ಕೆಲವು ಸಲ ಸಿಬ್ಬಂದಿಯವರ ಮೇಲೆ ಅಕ್ರಮಣ ಮಾಡುವೆ ಪ್ರಯತ್ನ ನಡೆದಿರುತ್ತದೆ. ಆದ್ದರಿಂದ ಇವರನ್ನು ಈ ಪ್ರದೇಶದಿಂದ ಹೊರಹಾಕಲು ಸಾಧ್ಯವಾಗಿಲ್ಲ.

ಇ) ಈ ಅರಣ್ಯ ಪ್ರದೇಶದಲ್ಲಿ ನೆಡುತೋಪು ಬೆಳೆಸುವ ಕಾರ್ಯಕ್ರಮ ಕೈಗೊಂಡಿದ್ದು ಅವುಗಳ ವಿವರ ಈ ಕೆಳಕಂಡಂತಿದೆ.

1990-91	-	25 ಹೆಕ್ಟೇರ್
1991-92	-	10 ಹೆಕ್ಟೇರ್
1992-93	-	ಇಲ್ಲ
1993-94	-	ಇಲ್ಲ
1994-95	-	10 ಹೆಕ್ಟೇರ್ ಗುಂಡಿ ನೆಡುತೋಪು
1995-96	-	ಪ್ರಸಕ್ತ ಸಾಲಿನಲ್ಲಿ ಮಳೆಗಾಲದಲ್ಲಿ 15 ಹೆ.ಮಿಶ್ರ ಜಾತಿಯ ನೆಡು ತೋಪನ್ನು ಬೆಳೆಸಲು ಕ್ರಮ ಕೈಗೊಂಡಿದೆ.

ಹರಿಹರದಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಹಾಸಿಗೆಗಳನ್ನೊದಗಿಸುವ ಬಗ್ಗೆ

157 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?